## ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.

## ಸಿ. ಸಿ. ನಂಃ 431/2018

ಪಿ.ಡಬ್ಲ್ಯೂ- 2
ಸಿ.ಡಬ್ಲೂ- 4

| | | |
|---|---|---|
| ಹೆಸರು | ಃ- | ರಿಚರ್ಡ ಪಾಂಗಳೇರ |
| ತಂದೆ / ಗಂಡನ ಹೆಸರು | ಃ- | ಜಾನ್ |
| ವಯಾ | ಃ- | 60 ವರ್ಷ |
| ಉದ್ಯೋಗ | ಃ- | ನಿವೃತ್ತ ಎ.ಎಸ.ಐ. |
| ವಾಸಸ್ಥಳ | ಃ- | ಹುಬ್ಬಳ್ಳಿ |

ಸತ್ಯ ಪ್ರತಿಜ್ಞೆ ಮೇರೆಗೆ - ದಿನಾಂಕಃ 28-07-2025.

***ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ***

ನಾನು 2018 ರಿಂದ 2020 ರವರೆಗೆ ನವಲಗುಂದ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿರುತ್ತೇನೆ.

1) ದಿನಾಂಕ 15-03-2018 ರಂದು ಬೆಳಗ್ಗೆ ಸುಮಾರು 10-00 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ದೂರವಾಣಿ ಕರೆ ಮಾಡಿ, ಆಯಟ್ಟಿ ಗ್ರಾಮದ ಬಸ್ಸ ನಿಲ್ದಾಣದ ಬಳಿ ರಾಜೇಸಾಬ್ ನದಾಫ್ ಎಂಬಾತನು ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಬಾತ್ಮಿ ಬಂದಿದ್ದು ತಿಳಿಸಿರುತ್ತಾರೆ. ಠಾಣಾ ಸಿಬ್ಬಂದಿಯವರಾದ ಚಾಸಾ-5 ರವರ ಮೂಲಕ ಚಾಸಾ-2 ಮತ್ತು ಚಾಸಾ-3 ರವರನ್ನು ಪಂಚರಾಗಿ ಬರಮಾಡಿಸಿಕೊಂಡು ಸದರಿಯವರಿಗೆ ಮಾಹಿತಿಯನ್ನು ತಿಳಿಸಿರುತ್ತಾರೆ.

2) ನಂತರ ಚಾಸಾ-5 ರವರು ಚಾಸಾ-2 ಮತ್ತು ಚಾಸಾ-3 ಪಂಚರನ್ನು ಬರಮಾಡಿಕೊಂಡು ಬಂದು, ಚಾಸಾ-1 ರವರು ನವಗೆಲ್ಲರಿಗೆ ಮಾಹಿತಿಯನ್ನು ತಿಳಿಸಿರುತ್ತಾರೆ. ನಂತರ ಚಾಸಾ-1 ರಿಂದ ಚಾಸಾ-3 ಹಾಗೂ ಚಾಸಾ-5 ರವರ ಸಂಗಡ ಇಲಾಖಾ ವಾಹನ ಸಂಖ್ಯೆ ಕೆಎ 25 ಜಿ

328 ನೇದ್ದರ ಮೇಲೆ ಸುಮಾರು ಬೆಳಗ್ಗೆ 10-45 ಗಂಟೆಗೆ ಠಾಣೆಯನ್ನು ಬಿಟ್ಟು, ಆಯಟ್ಟಿ ಗ್ರಾಮದ ಬಸ್ಸ ನಿಲ್ದಾಣದ ಸಮೀಪ ಹೋಗಿ ನಿಂತು ವೀಕ್ಷಣೆ ಮಾಡುತ್ತಿದ್ದಾಗ ಬಸ್ಸ ನಿಲ್ದಾಣದ ಬಳಿ ಒಬ್ಬ ವ್ಯಕ್ತಿ ತನ್ನ ಕೈಯಲ್ಲಿ ಒಂದು ಕೈಚೀಲ ಹಿಡಿದುಕೊಂಡು ಮದ್ಯ ಮಾರಾಟ ಮಾಡುತ್ತಿದ್ದ ಬಗ್ಗೆ ನೋಡಿರುತ್ತೇವೆ.

3) ನಂತರದಲ್ಲಿ ಸದರಿ ವ್ಯಕ್ತಿಯನ್ನು ತಡೆದು ಆತನ ಹೆಸರನ್ನು ಕೇಳಿ, ಸದರಿಯವನು ತನ್ನ ಹೆಸರು ರಾಜೇಸಾಬ್ ನದಾಪ್, ಸಾಃ ಆಯಟ್ಟಿ ಅಂತಾ ತಿಳಿಸಿರುತ್ತಾನೆ. ಆತನ ಬಳಿ ಮದ್ಯ ಮಾರಾಟ ಮಾಡಲು ಪರವಾನಿಗೆ ಇದ್ದ ಬಗ್ಗೆ ಕೇಳಲಾಗಿ ಸದರಿಯವನು ಇಲ್ಲಾ ಎಂದು ನುಡಿದಿರುತ್ತಾನೆ.

4) ನಂತರದಲ್ಲಿ ಆರೋಪಿತನ ಕೈ ಚೀಲದಲ್ಲಿ ಇದ್ದ ವಸ್ತುಗಳನ್ನು ನೋಡಲಾಗಿ ಅಲ್ಲಿ 90 ಎಂ.ಎಲ್ ನ 91 ಹೈವರ್ಡ್ಸ ವೀಸ್ಕಿ ಟೆಟ್ರಾಪ್ಯಾಕೇಟಗಳು ಇದ್ದವು. ನಂತರದಲ್ಲಿ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮದಲ್ಲಿ ಸದರಿ ಮದ್ಯದ ಪ್ಯಾಕೇಟಗಳನ್ನು ಬೆಳಗ್ಗೆ ಸುಮಾರು 11-05 ರಿಂದ 12-05 ಗಂಟೆಯವರೆಗೆ ಪಂಚನಾಮೆ ಮಾಡಿ ವಶಪಡಿಸಿಕೊಂಡು, ಅದರಲ್ಲಿ 02 ಪ್ಯಾಕೇಟಗಳನ್ನು ಪ್ರತ್ಯಕವಾಗಿ ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಬೇರಪಡಿಸಿ ಬಿಳಿ ಬಟ್ಟೆಯನ್ನು ಸುತ್ತಿ, ಅದರ ಮೇಲೆ ಪಂಚರ ಸಹಿ ಪಡೆದು ಇಲಾಖಾ ಮೊಹರನ್ನು ಹಾಕಿರುತ್ತೇವೆ. ಸದರಿ ಈಗ ವಶಪಡಿಸಿಕೊಂಡ ಮದ್ಯದ ಪ್ಯಾಕೇಟಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾಲು 01 ಎಂದು ಗುರುತಿಸಲಾಗಿರುತ್ತದೆ.

5) ನಂತರದಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ಮತ್ತು ಆರೋಪಿತನನ್ನು ಠಾಣೆಗೆ ಹಾಜರು ಪಡಿಸಿ ಠಾಣಾಧಿಕಾರಿಯ ತಾಬೆಯಲ್ಲಿ ಪಂಚನಾಮೆ ಮತ್ತು ಮುದ್ದೆ ಮಾಲುಗಳನ್ನು ಹಸ್ತಾಂತರಿಸಿ ಠಾಣೆಯಲ್ಲಿ ಚಾಸಾ-1 ರವರು ಗಣಕೀಕೃತ ಪ್ರಥಮ ಮಾಹಿತಿಯನ್ನು ನೀಡಿರುತ್ತಾರೆ. ಸಾಕ್ಷಿಯ ನ್ಯಾಯಾಲಯದ ಮುಂದೆ ಇದ್ದ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ನಂತರ ಹೇಳಿಕೆ ನೀಡಿರುತ್ತೇನೆ.

<u>ಪಾಟೀಸವಾಲು ಃ ಶ್ರೀ ಹೆಚ್ ಡಿ ಜಿ ವಕೀಲರಿಂದ ಃ -</u>

1) ಚಾಸಾ-5 ರವರು ಸ್ವಲ್ಪ ಹೊತ್ತಿನಲ್ಲಿ ಚಾಸಾ-2 ಮತ್ತು ಚಾಸಾ-3 ರವರನ್ನು ಕರೆದುಕೊಂಡು ಬಂದಿರುತ್ತಾರೆ. ಪಂಚರಲ್ಲಿ ಒಬ್ಬರು ಹಿರೇಮಠ ಅಂತಾ ಇನ್ನೊಬ್ಬರು ಹೂಗಾರ

ಅಂತಾ ಇರುತ್ತಾರೆ. ಇಲಾಖಾ ವಾಹನವನ್ನು ಚಾಲಕರು ಚಲಾಯಿಸುತ್ತಿದ್ದರು ಹೆಸರು ಈಗ ನೆನಪಿಲ್ಲ.

2) ಆಯಟ್ಟಿಗೆ ಹೋಗಲು ಯಮನೂರು ಮೂಲಕ ಹೋಗಿರುತ್ತೇವೆ. ಆಯಟ್ಟಿ ಗ್ರಾಮ ತಲುಪಿದಾಗ ಬೆಳಗ್ಗೆ 11-00 ಗಂಟೆಯಾಗಿರುತ್ತದೆ. ನವಲಗುಂದದಿಂದ ಆಯಟ್ಟಿ ಎಷ್ಟು ಅಂತರದಲ್ಲಿ ಇದೆ ಎಂದು ಈಗ ನೆನಪಿಲ್ಲ. ಆಯಟ್ಟಿಯಲ್ಲಿ ಬಸ್ಸ ನಿಲ್ದಾಣವು ಉತ್ತರ ದಿಕ್ಕಿನಲ್ಲಿ ಮುಖ ಮಾಡಿದೆ. ನಾವು ಹೋದ ಸಮಯದಲ್ಲಿ ಯಾವುದೇ ಬಸ್ಸು ಬಂದಿರುವುದಿಲ್ಲ. ಆರೋಪಿತನು ಪ್ರಥಮ ಬಾರಿ ನೋಡಿದಾಗ ಆತನು ಉತ್ತರಕ್ಕೆ ಮುಖ ಮಾಡಿ ನಿಂತಿದ್ದನು.

3) ಪಂಚನಾಮೆಯನ್ನು ಬರಹಗಾರರು ಬರೆದಿರುತ್ತಾರೆ ಅವರ ಹೆಸರು ಗೊತ್ತಿಲ್ಲ. ಸದರಿಯವರು ನಮ್ಮ ಸಂಗಡ ಇದ್ದರು. ನನ್ನ ಹೇಳಿಕೆಯಲ್ಲಿ ಸದರಿಯವರ ಉಲ್ಲೇಖವಿಲ್ಲ ಎಂದರೆ ಸರಿ. ಆರೋಪಿ ಕೈಯಲ್ಲಿ ಇದ್ದ ಚೀಲದ ಬಣ್ಣ ಈಗ ನೆನಪಿಲ್ಲ. ಅದನ್ನು ವಶಪಡಿಸಿಕೊಂಡಿರುತ್ತೇವೆ. ವಶಪಡಿಸಿಕೊಂಡ ಬಗ್ಗೆ ಪಂಚನಾಮೆಯಲ್ಲಿ ಉಲ್ಲೇಖ ಮಾಡಿದ ಬಗ್ಗೆ ಗೊತ್ತಿಲ್ಲ. ನಿಪಿ-1 ರಲ್ಲಿ ಉಲ್ಲೇಖಿಸಿದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ.

4) ನಾವು ಪ್ರಕರಣದ ಸಂಬಂದ ಯಾವತ್ತೂ ಆಯಟ್ಟಿ ಗ್ರಾಮಕ್ಕೆ ಹೋಗಿಲ್ಲ, ಅಲ್ಲಿ ಆರೋಪಿತನನ್ನು ನೋಡಿಲ್ಲ, ಆತನ ಬಳಿಯಿಂದ ಯಾವುದೇ ಮುದ್ದೆ ಮಾಲು ಅಥವಾ ಮದ್ಯದ ಪ್ಯಾಕೇಟಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಠಾಣೆಯಲ್ಲಿ ವಾರಸುದಾರರ ಇಲ್ಲದ ಮದ್ಯದ ಪ್ಯಾಕೇಟಗಳನ್ನು ಬಳಸಿ, ಠಾಣೆಯ ಅಂಕೆ ಸಂಖ್ಯೆಗೋಸ್ಕರ ಆರೋತಪಿನ ವಿರುದ್ಧ ಠಾಣೆಯಲ್ಲಿಯೆ ಕುಳಿತು ಪಂಚನಾಮೆಯನ್ನು ಬರೆದು ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತನಿಗೆ, ಮುದ್ದೆ ಮಾಲಿಗೂ ಮತ್ತು ಘಟನೆಗೂ ಯಾವುದೇ ಸಂಬಂದ ಇಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ. ಹೇ. ಕೇ. ಸರಿ. ಇದೆ.

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**